KATK010000522024

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ.5/2024**

ಪ್ರಾ.ಸಾ. ಃ **3**

ದೋ.ಸಾ. ಃ **2**

ದಿ.**16.03.2026**

ಹೆಸರು ಃ ನಾಗರಾಜು

ತಂದೆಯ ಹೆಸರು ಃ ಶಿವರಾಮಯ್ಯ

ವಯಸ್ಸು ಃ **48** ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಬೇಗೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನನಗೆ ಮೂಗನಪಾಳ್ಯ ಗಂಗಾಧರ ಮತ್ತು ಕುಣಿಗಲ್ ಕೋಟೆ ಬೆಲ್ಲ ಅಲಿಯಾಸ್ ರಂಗಸ್ವಾಮಿ ಗೊತ್ತಿದೆ. ಅವರು ನನ್ನ ಗೆಳೆಯರು. ನನಗೆ ಆರೋಪಿ ಗೊತ್ತಿದೆ. ನನಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ. ನಾನು ಗಂಗಾಧರ ಮತ್ತು ರಂಗಸ್ವಾಮಿ ಮದ್ಯಪಾನ ಮಾಡಲು ಕುಣಿಗಲ್ ಟೌನ್ ಮಲ್ಲಘಟ್ಟದಲ್ಲಿರುವ ಎಸ್.ಕೆ.ಎಂ ಬಾರ್ ಅಂಡ್ ರೆಸ್ಟೋರೆಂಟ್ ಗೆ ಮದ್ಯಪಾನ ಮಾಡಲು ಹೋಗುತ್ತೇವೆ. ದಿನಾಂಕ **01.10.2023** ರಂದು ನಾನು, ಮೂಗನಪಾಳ್ಯ ಗಂಗಾಧರ ಮತ್ತು ಕೋಟೆ ಬೆಲ್ಲ ಅಲಿಯಾಸ್ ರಂಗಸ್ವಾಮಿ ಎಸ್.ಕೆ.ಎಂ ಬಾರ್ ಅಂಡ್ ರೆಸ್ಟೋರೆಂಟ್ ಗೆ ಮದ್ಯಪಾನ ಮಾಡಲು ಹೋಗಿದ್ದೆವು. ನಾವು ಮದ್ಯಪಾನ ಮಾಡುತ್ತಿರಬೇಕಾದರೆ ಗಂಗಾಧರ ಜಾಸ್ತಿ ಮದ್ಯಪಾನ ಮಾಡಿ ನಮಗೆ ಏನೋ ಬೈಯ್ಯುತ್ತಿದ್ದನು. ನಾವು ಬೇರೆವರ ಬೈಕ್ ನಲ್ಲಿ ಗಂಗಾಧರನನ್ನು ಮನೆಗೆ ಕಳುಹಿಸಿ ನಾವು ಮನೆಗೆ ಹೋದೆವು. ಆರೋಪಿ ಗಂಗಾಧರನಿಗೆ ಅವಾಚ್ಯಶಬ್ಧಗಳಿಂದ ಬೈದಿಲ್ಲ, ಸ್ಟೀಲ್ ರೋಡ್ ನಿಂದ ಹಲ್ಲೆ ಮಾಡಿಲ್ಲ, ಜೀವ ಬೆದರಿಕೆ ಹಾಕಿಲ್ಲ. ನಾನು ಯಾವುದೇ ಹೇಳಿಕೆಯನ್ನು

ಕೊಟ್ಟಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

2. ದಿನಾಂಕ **01.10.2023** ರಂದು ಸಂಜೆ **6.30** ಗಂಟೆಗೆ ನಾನು ಚಾಸಾ.**1** ಗಂಗಾಧರ, ಚಾಸಾ.**3** ರಂಗಸ್ವಾಮಿ ಕುಣಿಗಲ್ ಟೌನ್ ಮಲ್ಲಘಟ್ಟದಲ್ಲಿರುವ ಎಸ್.ಕೆ.ಎನ್ ಬಾರ್ ಅಂಡ್ ರೆಸ್ಟೋರೆಂಟ್ ಗೆ ಹೋಗಿ ಮೊದಲನೇ ಮಹಡಿಯಲ್ಲಿ ಒಂದು ರೂಂ ನಲ್ಲಿ ಕೆ.ಎಫ್ ಸ್ಟ್ರಾಂಗ್ ಬಿಯರ್ ತೆಗೆದುಕೊಂಡು ಕುಡಿಯುತ್ತಿದ್ದಾಗ ಆರೋಪಿ ಬಂದು ಗಂಗಾಧರನಿಗೆ ಏನೋ ಬೋಳಿಮಗನೆ ನನ್ನ ಮುಂದೆ ಕುಳಿತುಕೊಂಡು ಕುಡಿಯುತ್ತೀಯ ನನ್ನ ನೋಡಿದರೆ ಎಲ್ಲರೂ ಹೆದರುತ್ತಾರೆ ಬೋಳಿಮಗನೆ ಭಯವಿಲ್ಲವಾ ನಿನಗೆ ಎಂದು ಬೈದು ತನ್ನ ಪಾಂಟ್ ನಲ್ಲಿ ಇಟ್ಟುಕೊಂಡು ಬಂದಿದ್ದ ಸ್ಟೀಲ್ ರಾಡ್ ಅನ್ನು ತೆಗೆದು ನಿನ್ನನ್ನು ಜೀವಂತವಾಗಿ ಉಳಿಸುವುದಿಲ್ಲ ನಿನ್ನನ್ನು ಕೊಂದೇ ತೀರುತ್ತೇನೆ ಎಂದು ಹೇಳಿ ಕೊಲೆ ಮಾಡುವ ಉದ್ದೇಶದಿಂದ ಗಂಗಾಧರನ ತಲೆಗೆ ರಾಡ್ ನಿಂದ **5-6** ಸಾರಿ ಬಲವಾಗಿ ಹೊಡೆದಿದ್ದನು ಎಂದರೆ ಸರಿಯಲ್ಲ. ಗಂಗಾಧರನ ತಲೆಯಿಂದ ರಕ್ತ ಚಿಮ್ಮಿ ಸುರಿಯಲಾರಂಭಿಸಿತು ಎಂದರೆ ಸರಿಯಲ್ಲ. ನಾನು ಮತ್ತು ರಂಗಸ್ವಾಮಿ ಅಲ್ಲಿಂದ ಆಚೆ ಹೋದೆವು ಎಂದರೆ ಸರಿಯಲ್ಲ. ನಂತರ ಗಂಗಾಧರನನ್ನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ತೋರಿಸಿ ಆದಿಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ್ದೆವು ಎಂದರೆ ಸರಿಯಲ್ಲ. ಗಂಗಾಧರನಿಗೂ ಆರೋಪಿಗೂ ಹಿಂದೆ ಗಣೇಶ ಉತ್ಸವದಲ್ಲಿ ಡಾನ್ಸ್ ಮಾಡುವ ವಿಚಾರಕ್ಕೆ ಗಲಾಟೆಯಾಗಿತ್ತು ಅದೇ ದ್ವೇಷದಿಂದ ಆರೋಪಿ ಕೃತ್ಯ

ಎಸಗಿದ್ದಾನೆಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆ ಎಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ.2 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಪವನ್ ಕುಮಾರ್ ಎಸ್.ವಕೀಲರಿಂದ ಆರೋಪಿತನ ಪರವಾಗಿ :**

ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು